ಗ್ರಾಮ ಅರಣ್ಯ ಸಮಿತಿಗಳ ರಚನೆ

3145 (3078); ಶ್ರೀ ಕುಮಾರಸ್ವಾಮಿ ಎಚ್.ಕೆ (ಸಕಲೇಶಪುರ)

ಅ) ರಾಜ್ಯದಲ್ಲಿ ಎಷ್ಟು ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಲಾಗಿದೆ;

ಆ) ಹಾಸನ ಜಿಲ್ಲೆ ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಲ್ಲಿ ಎಷ್ಟು ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಲಾಗಿದೆ (ವಿವರಗಳ ಪಟ್ಟಿ ನೀಡುವುದು)

ಇ) ಇವುಗಳ ಕಾರ್ಯ ವ್ಯಾಪ್ತಿಯ ವಿವರ ನೀಡುವುದು?

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ರಾಜ್ಯದಲ್ಲಿ ಜೆಬಿಐಸಿ ನೆರವಿನ 1ನೇ ಹಂತದ ಕರ್ನಾಟಕ ಪೂರ್ವ ಪ್ರಸ್ಥಭೂಮಿ ಅರಣ್ಯೀಕರಣ (EKAP) ಯೋಜನೆಯಡಿಯಲ್ಲಿ 3161 ಗ್ರಾಮ ಅರಣ್ಯ ಸಮಿತಿಗಳನ್ನು ಹಾಗೂ ಜೆಐಸಿಎ ನೆರವಿನ 2ನೇ ಹಂತದ ಕರ್ನಾಟಕ ಸುಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವ ವೈವಿಧ್ಯ ಸಂರಕ್ಷಣೆ ಯೋಜನೆಯಡಿ 1222 ಗ್ರಾಮ ಅರಣ್ಯ ಸಮಿತಿಗಳನನು ರಚಿಸಲಾಗಿದೆ.

ಆ) ಜೆಬಿಐಸಿ ನೆರವಿನ 1ನೇ ಹಂತದ ಕರ್ನಾಟಕ ಪೂರ್ವ ಪ್ರಸ್ಥಭೂಮಿ ಅರಣ್ಯೀಕರಣ (EKAP) ಯೋಜನೆಯಡಿಯಲ್ಲಿ ಆಲೂರು ತಾಲ್ಲೂಕಿನಲ್ಲಿ ಹಾಸನ ಪ್ರಾದೇಶಿಕ ವಿಭಾಗದಿಂದ ರಚಿಸಿದ ಗ್ರಾಮ ಅರಣ್ಯ ಸಮಿತಿ ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ಗ್ರಾಮ ಅರಣ್ಯ ಸಮಿತಿಯ ಹೆಸರು
1	ನಾಕಲಗೂಡು
2	ಮರಸು
3	ಕಾರ್ಜುವಳ್ಳಿ
4	ಬಿಗತ್ತೂರು

5	ಹೆಮ್ಮಿಗೆ
6	ಕಲ್ಲಾರೆ
7	ಭರತ್ತೂರು
8	ಪುರಬೈರವನಹಳ್ಳಿ
9	ಮಾದಿಹಳ್ಳಿ
10	ಹಂಜವಿಳಿ

ಜೆಬಿಐಸಿ ನೆರವಿನ ಕೆಸ್ಎಫ್ಎಂಬಿಸಿ ಯೋಜನೆಯಡಿ ಸಕಲೇಶಪುರ ತಾಲ್ಲೂಕುನಲ್ಲಿ ಹಾಸನ ಪ್ರಾದೇಶಿಕ ವಿಭಾಗದಿಂದ ರಚಿಸಿದ ಗ್ರಾಮ ಅರಣ್ಯ ಸಮಿತಿ ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ಗ್ರಾಮ ಅರಣ್ಯ ಸಮಿತಿಯ ಹೆಸರು
1	ಹಾದಿಗೆ
2	ಬುಗುಡಹಳ್ಳಿ
3	ಉಸೇರುಮನೆ
4	ನಡಹಳ್ಳಿ
5	ಮರಗುಂದ
6	ಅಗನಿ
7	ಕ್ಯಾಮನಹಳ್ಳಿ
8	ಗುಡಾಣಕೆರೆ
9	ಗೊದ್ದು
10	ದೊಡ್ಡಕುಂದೂರು
11	ಹಳ್ಳಿಯೂರು
12	ವಣಗೂರು
13	ಹೊಂಗಡಹಳ್ಳಿ

ಇ) ಗ್ರಾಮ ಅರಣ್ಯ ಸಮಿತಿಯ ಕರ್ತವ್ಯಗಳು ಮತ್ತು ಜವಾಬ್ದಾರಿಗಳು:–

ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ ಉದ್ದೇಶಕ್ಕಾಗಿ ಸೇರ್ಪಡೆ ಮಾಡಲಾದ ಯಾವುದೇ ಸರ್ಕಾರಿ ಜಮೀನಿನ ಅಭಿವೃದ್ಧಿಯಲ್ಲಿ ಪ್ರಧಾನ ಪಾತ್ರ ನಿರ್ವಹಿಸುವುದು.

ಅರಣ್ಯ ನಿರ್ಮಾಣದ ವಿಷಯದಲ್ಲಿ ಜಮೀನು ಗುರುತಿಸುವಿಕೆ ಸಸ್ಯ ಪ್ರಭೇದಗಳ ಆಯ್ಕೆ, ಸಂರಕ್ಷಣೆಯ ವಿಧಾನದ ವಿಷಯಗಳಲ್ಲಿ ನೆರವು ನೀಡುವುದು ಮತ್ತು ವ್ಲಾಂಟೇಷನ್‌ಗಳ, ಸಂರಕ್ಷಣೆ ಹಾಗೂ ನಿರ್ವಹಣೆಗೆ ಅಗತ್ಯ ನೆರವು ಹಾಗೂ ಸಹಕಾರ ನೀಡುವುದು.

ಇಲಾಖಾ ವತಿಯಿಂದ ಬೆಳೆಸಲಾದ ನೆಡತೋಪುಗಳನ್ನು ಮೂರು ವರ್ಷಗಳ ನಿರ್ವಹಣೆಯ ನಂತರ ಗ್ರಾಮ ಅರಣ್ಯ ಸಮಿತಿಯು, ಸಮಿತಿಯ ಸದಸ್ಯರ ಮೂಲಕ ಅಥವಾ ಅದರ ಸಂಪನ್ಮೂಲಗಳಿಂದ ನಿಯೋಜಿಸುವಂತೆ ಸಂದಾಯಿತ ಕಾವಲುಗಾರನ ಮೂಲಕ ನಿರ್ವಹಣೆಯ ಪೂರ್ಣ ಹೊಣೆಗಾರಿಕೆ ಹೊಂದಿದ್ದು, ಸಂರಕ್ಷಣೆ ನಿರ್ವಹಿಸುವುದು.

ಒತ್ತುವರಿಗಳು, ಬೆಂಕಿ, ಅಕ್ರಮವಾಗಿ ಮರಗಳನ್ನು ಕಡಿಯುವುದು, ಅರಣ್ಯ ಉತ್ಪನ್ನಗಳ ಕಳ್ಳಸಾಗಣೆ ಮತ್ತು ವನ್ಯಮೃಗಗಳ ಕಳ್ಳಬೇಟೆ ಇವುಗಳನ್ನು ತಡೆದು ಅರಣ್ಯವನ್ನು ಸಂರಕ್ಷಿಸುವುದು ಕಾಡಿನಲ್ಲಿ ಜಾನುವಾರುಗಳನ್ನು ಮೇಯಿಸುವುದನ್ನು ನಿಯಂತ್ರಿಸುವುದು ಹಾಗೂ ಅರಣ್ಯ ಸಂಪನ್ಮೂಲಗಳ ಅಭಿವೃದ್ಧಿಗೆ ಅಗತ್ಯವಾಗಿರುವ ಕಾರ್ಯಕ್ರಮಗಳನ್ನು ರೂಪಿಸಿ ಅರಣ್ಯಗಳನ್ನು ಸಂರಕ್ಷಿಸುವುದಲ್ಲದೇ ನೆಡುತೋಪುಗಳನ್ನು ಬೆಳೆಸುವಲ್ಲಿ ಗ್ರಾಮ ಅರಣ್ಯ ಸಮಿತಿಯು ಮಹತ್ವದ ಪಾತ್ರವಹಿಸುವುದು.

ಸರ್ಕಾರಿ ಆದೇಶ ಸಂಖ್ಯೆ: ಅಪಜೀ 50 ಎಫ್‌ಎಪಿ 2000, ದಿನಾಂಕ: 19–06–2002ರಂತೆ ನೆಡುತೋಪು ಕಡಿತಲೆಯಿಂದ ಮಾರಾಟದಿಂದ ಬಂದ ಆದಾಯವನ್ನು ಸರ್ಕಾರ ಹಾಗೂ ಗ್ರಾಮ ಅರಣ್ಯ ಸಮಿತಿ ನಡುವೆ ಹಂಚಿಕೆ ಮಾಡುವುದು.

ನೆಡುತೋಪುಗಳಿಂದ ದೊರೆಯುವ ಹುಲ್ಲು, ಎಲೆಗಳು ಹಾಗೂ ರೆಂಬೆ–ಕೊಂಬೆಗಳನ್ನು ಉಚಿತವಾಗಿ ಅಲ್ಲದೆ ಹಣ್ಣು–ಹಂಪಲುಗಳು ಸೌದೆ, ಪೋಲ್ಸ್ ಇತ್ಯಾದಿಗಳನ್ನು ರಿಯಾಯಿತಿ ದರದಲ್ಲಿ ಗ್ರಾಮ ಅರಣ್ಯ ಸಮಿತಿ ಸದಸ್ಯರು ಪಡೆಯುವ ಅವಕಾಶವಿರುತ್ತದೆ.

ಅಲ್ಲದೇ, ಕಿರು ಅರಣ್ಯ ಉತ್ಪನ್ನದಿಂದ ಬಂದ ಆದಾಯವನ್ನು ಸಹ ಗ್ರಾಮ ಅರಣ್ಯ ಸಮಿತಿಗೆ ಮೇಲಿನ ಸರ್ಕಾರದ ಆದೇಶದಂತೆ ಹಂಚಿಕೆ ಮಾಡಲಾಗುವುದು.

ಕಾಡಾನೆ ಹಾವಳಿ

3146 (3079); ಶ್ರೀ ಕುಮಾರಸ್ವಾಮಿ ಎಚ್.ಕೆ (ಸಕಲೇಶಪುರ)

ಅ) ಆಲೂರು ಮತ್ತು ಸಕಲೇಶಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಸರ್ಕಾರದ ಆದೇಶದಂತೆ 25 ಕಾಡಾನೆಗಳನ್ನು ಹಿಡಿಯದಿರುವುದು ನಿಜವೇ;

ಆ) ಕಾಡಾನೆಗಳ ಸಂಖ್ಯೆ ಇಮ್ಮಡಿಯಾಗುತ್ತಿದ್ದು, ಈ ಭಾಗದಲ್ಲಿ ಪ್ರಾಣಹಾನಿ ಮತ್ತು ಬೆಳೆ ಹಾನಿ ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸರ್ಕಾರ ಆನೆಧಾಮ ಅಥವಾ ಕಾರಿಡಾರ್ ರಚಿಸುವ ನಿರ್ಧಾರ ಮಾಡಿದೆಯೇ;

ಈ) ಈ ಭಾಗಗಳಿಗೆ ಸೋಲಾರ್ ಬೇಲಿ ನಿರ್ಮಿಸುವುದಕ್ಕಾಗಿ ಸರ್ಕಾರವು ಬಿಡುಗಡೆ ಮಾಡಿದ ಹಣವೆಷ್ಟು?